ಶ್ರೀ ಜೆ.ಎಸ್, ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಟ್ಯಾರಿಫ್ ದರವನ್ನು ಬೇರೆ ಬೇರೆ ಕೈಗಾರಿಕೆಗಳಿಗೆಂದು ಪ್ರತ್ಯೇಕವಾಗಿ ನಿಗದಿ ಮಾಡುವುದಿಲ್ಲ. ಆದರೆಅದನ್ನು ಗಂರುತಿಸಿದ ವರ್ಗಗಳ ಮೇಲೆ ನಿಗದಿ ಮಾಡಲಾಗುತ್ತದೆ.೨೫೦೦೦ ಕೆ.ವಿ.ಎ.ಗಿಂತ ಕಡಿಮೆ ಕಂಟ್ರಾಕ್ಟ್ ಡಿಮ್ಯಾಂಡ್ ಇರಂವ ಈ ಕೈಗಾರಿಕೆಗಳಿಗೆ ಮತ್ತು ಇತರೇ ಇದೇ ತರಹದ ಹೈ ಟೆನ್‌ಷನ್ ಕೈಗಾರಿಕೆಗಳಿಗೆ ಪ್ರತಿತಿಂಗಳೂ ಅವುಗಳು ಉಪಯೋಗಿಸಿದ ಯೂನಿಟ್ಟುಗಳ ಮೇಲೆ ಪ್ರತಿ ಯೂನಿಟ್ಟಿಗೂ ೫೦ ಪೈಸೆಯಂತೆಯೂ ಬಿಲ್ಲಿಂಗೆ ಡಿಮ್ಯಾಂಡ್ ಮೇಲೆ ಪ್ರತಿ ಕೆ.ವಿ.ಎ.ಗೆ ೩೫ ರೂಪಾಯಿಗಳಂತೆಯೂ ವಿದ್ಯುತ್ ಶುಲ್ಕವನ್ನು ವಿದ್ಯುತ್ ವಂಂಡಳಿ ನಿಗದಿ ವಾಡಿದೆ.

ವಿದ್ಯುತ್ ಕಡಿತಕ್ಕೆ ಒಳಪಡುವ ಎನ್‌ಸ್ಟಾಲೇಷನ್‌ಗಳು ಅವುಗಳಿಗೆ ನಿಗದಿ ಮಾಡಿದ ಯೂನಿಟ್ಟುಗಳ (ಮಾಹೆಯಾನ) ಶೇ ೨೫ರಷ್ಟು ಪ್ರತಿ ಯೂನಿಟ್ಟಿಗೆ ೮೦ ಪೈಸೆಯಂತೆಯೂ ಮತ್ತು ಉಳಿದ ಯೂನಿಟ್ಟುಗಳಿಗೆ ಯೂನಿಟ್ಟಿಗೆ ೫೦ ಪೈಸೆಯಂತೆ ವಿದ್ಯುತ್ ಶುಲ್ಕ ಕೊಡಬೇಕಾಗುತ್ತದೆ.

ಆ) ಬಿ.ಜಿ.ಎಂ.ಎಲ್ ಮತ್ತು ಬಿ.ಇ.ಎಂ.ಎಲ್ ಗಳಿಗೆ ಮೇಲೆ ತಿಳಿಸಿರುವ ಟ್ಯಾರಿಫ್ ದರವು ಅನ್ವಯವಾಗುತ್ತದೆ. ೧-೪-೧೯೮೫ರಿಂದ ೩೧-೧೨-೧೯೮೫ರ ವರೆಗೆ ಈ ಕೈಗಾರಿಕೆಗಳು ಉಪಯೋಗಿಸಿದ ವಿದ್ಯುತ್‌ನ ವಿವರಗಳು ಈ ಕೆಳಕಂಡಂತೆ ಇದೆ.

೧) ಬಿ.ಜಿ.ಎಂ.ಎಲ್.—೬೨೦,೮೫೫,೮೬೭ ಯೂನಿಟ್ಟುಗಳು

೨) ಬಿ.ಇ.ಎಂ.ಎಲ್.—
- ೧) ಕೆ.ಜಿ.ಎಫ್.—೪೮,೨೦,೮೫೮ ಯೂನಿಟ್ಟುಗಳು
- ೨) ಬೆಂಗಳೂರು.—೨೫,೦೦,೮೦೦ ಯೂನಿಟ್ಟುಗಳು
- ೩) ವೈಸೂರು.—೩,೩೩,೨೬೪ ಯೂನಿಟ್ಟುಗಳು

೩) ಸರ್ಕಾರಕ್ಕೆ ಈ ಅಭಿಪ್ರಾಯ ಗೊತ್ತಿದೆ,

ಈ) ಭಾರತ ಸರ್ಕಾರದಿಂದ ಈ ಬಗ್ಗೆ ಬೇಡಿಕೆ ಬಂದಿಲ್ಲ. ಆದರೆ ಬಿ.ಜಿ.ಎಂ.ಎಲ್ ರವರ ಮೂಲಕ ಬೇಡಿಕೆ ಬಂದಿದೆ, ಇದನ್ನು ಒಪ್ಪಲು ಸಾಧ್ಯವಾಗಲಾರದು.

ಶ್ರೀ ಟಿ.ಎಸ್. ಮಣಿ.—ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಇಂಗ್ಲಿಷ್‌ನಲ್ಲಿ ಹೇಳಬೇಕು, ಇಲ್ಲದಿದ್ದರೆ ನಮಗೆ ಅಂಡರ್‌ಸ್ಟ್ಯಾಂಡ್ ಆಗುವುದಿಲ್ಲ. ಉತ್ತರ ಕನ್ನಡದಲ್ಲಿ ಮಾತ್ರ ಕೊಟ್ಟಿದ್ದಾರೆ, ಕನ್ನಡ ಇಂಗ್ಲಿಷ್ ಎರಡರಲ್ಲೂ ಕೊಡಬೇಕು, ಇಲ್ಲದಿದ್ದರೆ ನಮಗೆ ಅರ್ಥ ಆಗುವುದಿಲ್ಲ.

ಅಧ್ಯಕ್ಷರು.—ಆಯಿತು, ಇಂಗ್ಲೀಷ್‌ನಲ್ಲಿ ಕೊಡಿಸುತ್ತೇನೆ.

SRI T.S. MANI.—At present the B.G,M,L. is facing power crisis, I request the Government to reconsider and give relief.

ಶ್ರೀ ಜೆ.ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ಈಗಲೇ ಎರಡೂ ಕಂಪನಿಗಳಿಗೆ ಪವರ್ ಕಟ್ ಮಾಡಿಲ್ಲ, ಮುಂದೆ ಈ ರೀತಿ ಆದರೆ ಇದರ ಬಗ್ಗೆ ವಿಚಾರ ಮಾಡುತ್ತೇನೆ.

ಹುಂಡೇಕಾರ ಆಯೋಗದ ವರದಿ

೧೦. ಶ್ರೀ ಕೆ.ಹೆಚ್ ಪಾಟೀಲ್ (ಗದಗ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪುನರ್ ವಿಂಗಡಣೆಗೆ ಸಂಬಂದಿಸಿದಂತೆ ನೇಮಿಸಲಾದ ಶ್ರೀ ಹುಂಡೇಕರ್ ಸಮಿತಿಯವರು ತಮ್ಮ ವರದಿಯನ್ನು ಒಪ್ಪಿಸಿರುವರೆ ?

ಆ) ಈ ಬಗ್ಗೆ ಕೆಲವು ಪತ್ರಿಕೆಗಳಲ್ಲಿ, ಈಗಾಗಲೇ ಮೊದಲು ನೇಮಕಗೊಂಡ ವಾಸುದೇವ ರಾವ್ ಸಮಿತಿಯ ಶಿಫಾರಸ್ಸುಗಳ ತದ್ವಿರುದ್ಧ ವರದಿಯೊಂದು ಪ್ರಕಟಣೆಯಾಗಿರುವುದು ನಿಜವೇ ?

ಇ) ಈ ರಹಸ್ಯ ವರದಿಯನ್ನು ಪ್ರಕಟಿಸಿರುವವರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು)--

ಅ) ಸಮಿತಿಯು ವಂದ್ಯಾಂತರ ವರದಿಯನ್ನು ಒಪ್ಪಿಸಿದೆ, ಆದರೆ ಅಂತಿಮ ವರದಿಯನ್ನು ಇನ್ನೂ ಸಲ್ಲಿಸಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.--ಮಾನ್ಯ ಅಧ್ಯಕ್ಷರೇ, ಈ ಹಗ್ಗೆ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಇಲ್ಲ ಎಂದು ಹೇಳಿದ್ದಾರೆ. ಇದು ತಾವು ಪತ್ರಿಕೆಗಳನ್ನು ನೋಡುವುದಿಲ್ಲ ಎಂದು ಅಭಿಪ್ರಾಯವೋ ಅಥವಾ ಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲ ಎಂಬುದು ತಮ್ಮ ಅಭಿಪ್ರಾಯವೋ. ಈಗ ಸಮಿತಿಯು ಸಲ್ಲಿಸಿರುವ ಇಂಟೀರಿಯಂ ರಿಪೋರ್ಟ್‌ನ್ನು ಪ್ರಕಟಿಸಲಿಕ್ಕೆ ಅಭ್ಯಂತರ ಏನೂ ಇಲ್ಲ. ಆ ವರದಿಯನ್ನು ಪ್ರಕಟ ಮಾಡುತ್ತೀರಾ ? ಇಂಟೀರಿಯಂ ವರದಿಯ ಮೇಲೆ ತಾವು ಏನೂ ಆಕ್ಷನ್ ತೆಗೆದುಕೊಳ್ಳುವುದಿಲ್ಲವೇ ? ಪತ್ರಿಕೆಗಳಲ್ಲಿ ಮೊದಲಂ ವಾಸುದೇವರಾವ್ ಸಮಿತಿಯ ಶಿಫಾರಸ್ಸುಗಳ ವರದಿ ಎಂದು ಏನು ಪ್ರಕಟಿಸಿದ್ದರು. ಈಗ ಅದಕ್ಕೆ ತದ್ವಿರುದ್ಧವಾದ ವರದಿ ಪ್ರಕಟವಾಗಿದೆ. ಮೊದಲನೇ ವರದಿಯ ಒಳಗೆ ಗದಗ್‌ನ್ನು ಜಿಲ್ಲೆಯನ್ನಾಗಿ ಮಾಡುವಂತೆ ಇದ್ದುದು, ಹುಂಡೇಕಾರ್ ಸಮಿತಿ ವರದಿಯಲ್ಲಿ ಬಾಗಲಕೋಟೆಯನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಬಂದಿವೆ. ಇದು ಮೂರರಂ ನಾಲ್ಕು ಮಹತ್ವದ ಪತ್ರಿಕೆಗಳಲ್ಲಿ ಬಂದಿದೆ. ಈ ವರದಿ ತಪ್ಪಿದ್ದರೆ ನನಗೆ ಬಹಳ ಸಂತೋಷ. ಇದು ಸರಿಯೇ ಇಲ್ಲವೇ ಎಂಬುದನ್ನು ತಮ್ಮಿಂದ ಕೇಳಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.--ಪತ್ರಿಕಾ ವರದಿ ಸರಿಯಲ್ಲ. ವಂಧ್ಯಂತರ ವರದಿಯನ್ನು ಇನ್ನೂ ಮಂತ್ರಿ ಮಂಡಲ ಪರಿತೀಲನೆ ಮಾಡಿಲ್ಲ. ಆದನ್ನು ಪ್ರಕಟಿಸುವುದಕ್ಕೂ ಸಾಧ್ಯ ಇಲ್ಲ. ವಂಧ್ಯಂತರ ವರದಿಯ ಮೇಲೆ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲ. ಕೊನೇ ವರದಿ ಬಂದ ಮೇಲೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ

೧೯೩. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).-- ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ೧೯೭೫ರ ನಂತರ ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಒಟ್ಟಾರೆ ನಿಲಂಬಿತ ಹಾಗೂ ಕೆಲಸದಿಂದ ವಜಾ ಮಾಡಿರುವ ಸಿಬ್ಬಂದಿಯವರ ಹೆಸರುಗಳೇನು ?

ಆ) ನಿಲಂಬಿತ ಹಾಗೂ ವಜಾ ಮಾಡಿರುವ ಸಿಬ್ಬಂದಿ ಅವರ ಮೇಲೆ ಇರತಕ್ಕಂತಹ ಆರೋಪಗಳೇನು ?

ಇ) ಅನ್ಯಾಯಕ್ಕೊಳಪಟ್ಟಿರುವ ಕಾರ್ಮಿಕ ವರ್ಗಕ್ಕೆ ಸರ್ಕಾರದಿಂದ ಮಾಡಿರುವ ಸಹಾಯವೇನು ?

ಈ) ಸಕ್ಕರೆ ನಿರ್ದೇಶಕರಿಂದ ವಜಾ ಮಾಡಿರುವ ಸಿಬ್ಬಂದಿ ವರ್ಗದ ವಿಷಯದಲ್ಲಿ ತಡೆ ಆಜ್ಞೆ ಇದ್ದಾಗ್ಯೂ ಕಾಯ್ದೆಯ ಉಲ್ಲಂಘನೆ ಮಾಡಿ ನೌಕರರನ್ನು ಹೊರಹಾಕಿರುವ ಕಾರ್ಯನಿರ್ದೇಶಕರ ಕರ್ತವ್ಯದಲ್ಲಿ ಚ್ಯುತಿ ಆದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಸಕ್ಕರೆ ನಿರ್ದೇಶಕರ ತಡೆ ಆಜ್ಞೆ ಇದ್ದಾಗ್ಯೂ ವಜಾ ಮಾಡಿರುವ ಕಾರ್ಯನಿರ್ದೇಶಕರ ಮೇಲೆ ಸರ್ಕಾರದಿಂದ ತೆಗೆದುಕೊಳ್ಳಬಹುದಾದ ಕಾರ್ಯಕ್ರಮಗಳೇನು ?

ಊ) ಕ್ಷುಲ್ಲಕ ಕಾರಣಗಳಿಂದ ವಜಾ ಮಾಡಿರುವ ಸಿಬ್ಬಂದಿ ವರ್ಗವನ್ನು ಕೆಲಸದ ಮೇಲೆ ಹಾಜರಿ ಮಾಡಿಸಿ ಕೊಳ್ಳಲು ಸರ್ಕಾರದವರು ತೆಗೆದುಕೊಳ್ಳಬಹುದಾದ ಕಾರ್ಯಕ್ರಮಗಳೇನು ?